
**ಮಂತ್ರಾಲಯ ನೋಡಲು ಬರುವ ಭಕ್ತರಿಗೆ ರಾಯರ ದರ್ಶನದ ಜೊತೆಗೆ ಸುತ್ತಲಿನ ಧಾರ್ಮಿಕ ಮತ್ತು ಐತಿಹಾಸಿಕ ಸ್ಥಳಗಳನ್ನು ನೋಡುವ ಅವಕಾಶವೂ ಇದೆ. ಅದಕ್ಕೆ, ಭಕ್ತರು ತುಸು ಬಿಡುವು ಮಾಡಿಕೊಂಡೇ ರಾಯರ ಸನ್ನಿಧಿಯತ್ತ ಬರಬೇಕು. ಸನ್ನಿಧಿಯಿಂದಲೇ ಖಾಸಗಿ ವಾಹನಗಳ ಸೌಲಭ್ಯವೂ ಇದೆ. ಪಂಚಮುಖಿ, ಬಿಚ್ಚಾಲಿ, ಅಪ್ಪಾವರ ಕಟ್ಟೆ, ಉತ್ತನೂರು, ಸಂಕಾಪುರ, ವೇಣಿಸೋಮಪುರ, ಮೊದಲಕಲ್, ಆದೋನಿ ಮಂಗರಾಯ, ಚಿಕ್ಕಲಪರ್ವಿ, ಕಲ್ಲೂರು ಮಹಾಲಕ್ಷ್ಮೀ ಹೀಗೆ ಅನೇಕ ಸ್ಥಳಗಳನ್ನೂ ಕಣ್ತುಂಬಿಕೊಳ್ಳಬಹುದು.**




ಮತ್ತು ಸುಳಾದಿಗಳನ್ನು ಅಳವಡಿಸಲಾಗಿದೆ. ಹರಿದಾಸ ಪರಂಪರೆಯನ್ನು ಪ್ರಖ್ಯಾತಿಪಡಿಸಿದ ಪುರಂದರದಾಸರು, ಜಗನ್ನಾಥದಾಸರು, ವಿಜಯದಾಸರು, ಗೋಪಾಲದಾಸರು, ಅಸ್ಕಿಹಾಳ ಗೋವಿಂದದಾಸರು ಹೀಗೆ ಅನೇಕರ ಬದುಕಿನ ಕಥನವನ್ನು ತಿಳಿಸಲಾಗುತ್ತಿದೆ. ಅವರ ಬದುಕಿನ ವಿವಿಧ ಮಗ್ಗಲುಗಳು, ಛಾಯಾಚಿತ್ರಗಳು ಕಾಣಸಿಗುತ್ತವೆ.


ಹರಿದಾಸರು ರಚಿಸಿದ ಕೃತಿಗಳು, ಸಾಹಿತ್ಯ, ಗ್ರಂಥಗಳ ಪ್ರದರ್ಶನ, ಹವಾನಿಯಂತ್ರಿತ ಸೌಲಭ್ಯ, ದಾಸರು ವಾಸ ಮಾಡಿದ ಮನೆಯ ಮಾದರಿ, ಪೂಜಿಸಿದ ವಿಗ್ರಹಗಳು, ಪಂಚಮುದ್ರೆ ಸೇರಿದಂತೆ ವಿವಿಧ ವಸ್ತುಗಳನ್ನು ಸಂಗ್ರಹಿಸಲಾಗಿದೆ. ದಾಸ ಸಾಹಿತ್ಯ ಪರಂಪರೆಯ ಒಟ್ಟಾರೆ ಚಿತ್ರಣವನ್ನು ಒಂದೇ ವೇದಿಕೆಯಲ್ಲಿ ನೋಡಲು ಸಂಗ್ರಹಾಲಯ ಅನುಕೂಲವಾಗಿದೆ. ಸಂಪೂರ್ಣವಾಗಿ ಇದನ್ನು ನೋಡಲು ಕನಿಷ್ಠ ಐದಾರು ಗಂಟೆಗಳಾದರೂ ಬೇಕಾಗುತ್ತದೆ.

### ವರ್ಷಪೂರ್ತಿ ಕಾರ್ಯಕ್ರಮ

ರಾಯರ ಸನ್ನಿಧಿಯಲ್ಲಿ ವರ್ಷಪೂರ್ತಿ ಒಂದಲ್ಲ ಒಂದು ಕಾರ್ಯಕ್ರಮಗಳು ಇದ್ದೇ ಇರುತ್ತವೆ. ಪ್ರತಿ ಗುರುವಾರ ವಿಶೇಷವಾಗಿ ನಡೆಯುವ ರಥೋತ್ಸವ ಅದ್ದೂರಿಯಾಗಿರುತ್ತದೆ. ಧನುರ್ಮಾಸದ ಆಚರಣೆ, ನಿಯಮಿತ ಪೂಜೆ, ತುಳಸಿ ಅರ್ಚನೆ, ಹಸ್ತೋದಕ, ರಥೋತ್ಸವ, ಮಹಾಮಂಗಳಾರತಿ, ಆರತಿ, ಮೂಲ ರಾಮದೇವರ ನಿಯಮಿತ ಪೂಜೆ, ಅನ್ನದಾನ, ವಸ್ತ್ರ ಸಮರ್ಪಣ ಸೇವೆ, ಬಂಗಾರದ ಪಲ್ಲಕ್ಕಿ ಸೇವೆ, ಚಿನ್ನದ ರಥ ಸೇವೆ, ಕನಕ ಕವಚ, ರಜತ ರಥೋತ್ಸವ, ಕನಕ ಮಹಾ ಪೂಜೆ, ಸುಪ್ರಭಾತ ಸೇವೆ, ತುಲಾಭಾರ ಸೇವೆ, ಅರ್ಚನೆ ಹೀಗೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನದಲ್ಲಿ ನಡೆಯುತ್ತಲೇ ಇರುತ್ತವೆ.

### ಈ ಸ್ಥಳಗಳನ್ನೂ ನೋಡಿ

ಮಂತ್ರಾಲಯವನ್ನು ನೋಡಲು ಬರುವವರು ಸುತ್ತಲಿನ ಧಾರ್ಮಿಕ ಮತ್ತು ಐತಿಹಾಸಿಕ ಸ್ಥಳಗಳನ್ನೂ ನೋಡಬಹುದು. ಇದಕ್ಕಾಗಿ ರಾಯರ ಸನ್ನಿಧಿಯಿಂದಲೇ ಖಾಸಗಿ ವಾಹನಗಳ ಸೌಲಭ್ಯಗಳಿವೆ. ಪಂಚಮುಖಿ, ಬಿಚ್ಚಾಲಿ, ಅಪ್ಪಾವರ ಕಟ್ಟೆ, ಉತ್ತನೂರು, ಸಂಕಾಪುರ, ವೇಣಿಸೋಮಪುರ, ಮೊದಲಕಲ್, ಆದೋನಿ ಮಂಗರಾಯ, ಚಿಕ್ಕಲಪರ್ವಿ, ಕಲ್ಲೂರು ಮಹಾಲಕ್ಷ್ಮೀ ಹೀಗೆ ಅನೇಕ ಸ್ಥಳಗಳು ಪ್ರಾಮುಖ್ಯತೆ ಪಡೆದಿವೆ. ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ರಾಯರಿಗೆ ನೇರವಾಗಿ ಸಂಬಂಧಿಸಿದ



ಮಂತ್ರಾಲಯದಲ್ಲಿರುವ ದಾಸ ಸಾಹಿತ್ಯದ ಸಂಗ್ರಹಾಲಯ